'ಮತ್ತೆ...? ಹಿಂಗಿದ್ದಾಗ ನಡದೀತಾ? ನಮ್ಮ ಸುತ್ತಲಿನ ಹತ್ತಾರು ಹಳ್ಳಾಗ ಎಲ್ಲಿ ನಡದದ ಹೇಳ್ರಿ. ಊರುಕೇರಿ ಮಂದಿ ಒಪ್ಪ್ಯಾರೇನು? ಧರ್ಮ ಅಂತ ನಮ್ದು ಒಂದೈತೆಯಲ್ಲ?'

'ಮಲ್ಲಪ್ಪ, ದಯವಿಲ್ಲದ ಧರ್ಮ ಇದ್ದರೇನು? ಬಿಟ್ಟರೇನು? ಇದು ಶರಣರ ಮಾತು. ವಚನ ತತ್ತ್ವದ ಪ್ರಕಾರ ಆದೀಶ ತಪ್ಪು ಮಾಡ್ತಿಲ್ಲ...'

'ತಾತ, ಮಗನಿಗೆ, ಇದು ಆಗದ ಮಾತು. ನಾಕ ಮಂದಿ ಒಪ್ಪುವ ಮಾತಲ್ಲ' ಅಂತ ನಿಷ್ಠುರವಾಗಿ ಹೇಳು.'

'ಯಜಮಾನ್ರೇ, ಅದು ನಿಮ್ಮ ಮಾತು; ನನ್ನ ಮಾತಲ್ಲ...'

ಮಲ್ಲಿಕಾರ್ಜುನಪ್ಪ ಆವೇಶದಿಂದಿದ್ದ. ತಾತನ ಸೂಕ್ಷ್ಮ ಮಾತುಗಳನ್ನು ಕೇಳಿಸಿಕೊಂಡು ಅರಿಯಲು ಹೋಗಲಿಲ್ಲ. ತಾತನಿಗೆ ಏನು ಮಾತಾಡಿದ್ರು ಮಲ್ಲಪ್ಪನಿಗೆ ನಾಟುವುದಿಲ್ಲ ಎಂದು ತಿಳಿಯಿತು...

'ಹೆಣ್ತಿಗೆ ಮಗನ ಮಾತು ಕೇಳಿ ನಿದ್ದೆ ತಪ್ಪಿ ಹೋಗ್ಯಾದ! ಆದ್ರೆ ಆಕೆಗೆ ಕಿರಿಮಗನ ಮ್ಯಾಲೆ ಕಕ್ಕುಲಾತಿ ಜಾಸ್ತಿ. ಆಕೆಗಿಂತ ನನ್ನ ಕಕ್ಕಲಾತಿ ಜಾಸ್ತಿ. ಆದ್ರ ಹಿರಿಮಕ್ಳು, ಸೊಸೆಯಂದಿರು, ಬಂದು-ಬಳಗ ನಮ್ಮ ಮನೆಯ ಮಾನ ಏನಾದೀತಂತ ಸಿಟ್ಟಿಗೆದ್ದಾರ. ತಮ್ಮ ಆದೀಶನ ಮ್ಯಾಲೆ ಉರಿದು ಬಿದ್ದಾರ. ಆದೀಶ ಅಂಜಿಲ್ಲ. ಹೆದರಿಲ್ಲ. ಈಗಂತೂ ಮಾತಡದೇ ಬಿಟ್ಟು ಬಿಟ್ಟಾನ. ಎಲ್ಲಿ ಜೀವಕ್ಕ ಸಂಚಗಾರ ತಂದುಕೊಂಡಾನಂತ ನನ್ನ-ಆಕೆ ಎದೆ ಒಡದಂಗಾಗ್ಯಾದ. ನಾವಿಬ್ರು ಮಕ್ಳು-ಸೊಸೆಯಂದಿರ ಬಾಯಿ ಮುಚ್ಚಿಸಿ, ಮಗನ ಬೆನ್ನಿಗೆ ನಿಂತೀವಿ. ನೀನು ಕರದು ಬುದ್ಧಿ ಮಾತು ಹೇಳು. ಊರಿಗೆ ಊರುಗಳೇ ನಿನ್ನ ಅಡ್ಡ ಬಿದ್ದು ಮಾತು ಕೇಳ್ತಾವ. ಆದೀಶ ಯಾವ ಲೆಕ್ಕ ನಿನ್ನ?'

'ಎಲ್ಲರೂ ಸಮಾಧಾನದಿಂದ ಇರದು ಕಲಿರಿ. ಕಾಲದ ಕೈಯಾಗ ನಾವಿದ್ದೀವಿ. ವಿಚಾರ ಮಾಡಿಕೊಂಡು ಮಾತಾಡ್ರಿ. ಆದ್ರೆ ಯಾರಿಗೆ ಕೇಡಾಗದಂಗ ನಡಕೊಳ್ರಿ' ಎಂದು ಶಿವಮಲ್ಲಯ್ಯ ತಾತ ಹೇಳಿ, ಪ್ರಸಾದದ ಕೋಣೆಗೆ ಮಲ್ಲಿಕಾರ್ಜುನಪ್ಪನನ್ನು ಕರೆದುಕೊಂಡು ನಡೆದ.

* * *

ಮಲ್ಲಿಕಾರ್ಜುನಪ್ಪ ಬಂದು ಮಾತನಾಡಿ ಹೋಗಿ ವಾರ ಮುಗಿದಿತ್ತು. ಕಲ್ಯಾಣಪುರದಿಂದ ಬಂಡಿ ಸಿದ್ರಾಮಪುರಕ್ಕೆ ಬಂತು. ಜೀತದಾಳು ಬಂದು 'ತಾತಪ್ಪನೋರ, ಯಜಮಾನ ನಿಮ್ಮನ್ನ ಕರಕೊಂಡು ಬಾ ಎಂದು ಬಂಡಿ ಕಳಿಸ್ಯಾನ' ಎಂದು ನಿಂತು ಕೈಮುಗಿದ. ತಾತನಿಗೆ ತಕ್ಷಣ ಅರಿವು ಜಾಗೃತವಾಯ್ತು. ಆದೀಶ ಹೋಗಿ, ಕಂಡು ಮಾತಾಡಿರಬೇಕು ಅನ್ನಿಸಿತು. ಚೂರೂ ತಡ ಮಾಡದೆ ತಯಾರಾಗಿ ಬಂಡಿಯಲ್ಲಿ ಕುಂತು ಹೊರಟ. ಒಂದೂವರೆ ತಾಸಿನ ದಾರಿ. ಹೋಗಿ ತಲುಪಿದ.

'ತಾತ, ಮಲ್ಲಪ್ಪನ ಸಣ್ಣ ಮಗ ಬಂದು ಗಂಡಾಂತರದ ವಿಷಯ ಹೇಳಿ ಹೋದ! ನನ್ಗ ಸಿಟ್ಟು ಬಂತು! ಆದ್ರೆ ಹುಡುಗ ಸಾತ್ವಿಕನಂಗ ಕಂಡ. ಅವನ ತಿಳಿವಳಿಕೆ ವಯಸ್ಸಿಗೆ ಮೀರಿದ್ದು ಅನ್ನಿಸಿತು.'

'ನಾನೂ ಆ ಹುಡುಗನ್ನ ನೋಡಿದ್ದೀನಿ. ಅಪ್ಪನಿಂದ ಬಂಡಿಯಲ್ಲಿ ಊರಿಗೆ ಬರ್ತಾನ. ಹೈದ್ರಾಬಾದಿನ್ಯಾಗ ಓದುತ್ತಿದ್ದ. ಸ್ವಾತಂತ್ರ್ಯ ಹೋರಾಟ, ರಜಕಾರರ ದಾಳಿ ನಡದಿದ್ದವಲ್ಲ ಆಗ ಊರಿಗೆ ಬಂದವನು ಮತ್ತೆ ಹೋಗಲಿಲ್ಲಂತ.'

'ನಾನೂ ಆ ಸುದ್ದಿ ಕೇಳಿನಿ. ಸೈನಿಕ್ರು ಬಂದು, ನಿಜಾಮನನ್ನ ಕೆಳಗಿಳಿಸಿದ ಮ್ಯಾಲೆನೂ ಎರಡು ಮೂರು ವರ್ಷ ಹೈದ್ರಾಬಾದು ಶಾಂತ ಇರ್ಲಿಲ್ಲ. ಆಮ್ಯಾಲೆ ಶಾಲೆ ಕಾಲೇಜುಗಳು ಸರಿಯಾಗಿ ನಡದವಲ್ಲ, ಆಗ ಆದೀಶ ಹೋಗಿ ಕಲಿಬೇಕಾಗಿತ್ತು...'

'ಅದೇ ಶಿವಸಂಗಪ್ಪ, ಬಸವಪುರಕ್ಕೆ ರಜಾಕರ್ರು ದಾಳಿ ಮಾಡಿ, ಮಲ್ಲಪ್ಪನನ್ನೇ ಹಿಡಿದು ಕಟ್ಟಿ ಹಾಕಿ ಕೂಡಿಸಿದ್ರಲ್ಲ, ಆಗ ನೀನೇ ಹೋಗಿ ಮಾತುಕತೆ ಆಡಿ ಬಿಡಿಸಿ ಬಂದಿದ್ದಿ...'

'ಹೌದೌದು. ಅದೆಲ್ಲ ನಡೀತು. ನಿಜಾಮನ ಕಡೆಯ ಒಬ್ಬ ಅಧಿಕಾರಿ ನನ್ಗ ಕೂನಯಿದ್ದ. ಆತನ ಮೂಲಕ ರಜಾಕಾರರಿಗೆ ಹೇಳಿಸಿ ದಾಳಿ ತಡೆದಿದ್ದೆ.'

'ಮಲ್ಲಪ್ಪ ಅದನ್ನ ಮರತಿಲ್ಲ. ಶಿವಸಂಗಪ್ಪ ಯಜಮಾನ ಬಂದು ನನ್ನ ಬಿಡಸದಿದ್ದರ, ಅವ್ರು ಅಂದು ಮನೆ ಲೂಟಿ ಮಾಡ್ತಿದ್ರು ಎಂದು ನೆನಸ್ತಾನ.'

'ಮಾತು ಎತ್ತ ಎತ್ತಗೋ ಹೋಗ್ತಾವ. ವಿಷಯಕ್ಕ ಬರ್ತೀನಿ. ನಿನ್ನ ಕರೆಸಿದ್ದು ಅದಕ್ಕ. ಅಂದಂಗ ಆದೀಶ ಹುಡುಗ ನಮ್ಮ ಶಿವಗೀತನ್ನ ಅವರ ಮನ್ಯಾಗೊಮ್ಮೆ, ನಮ್ಮನ್ಯಾಗೊಮ್ಮೆ ನೋಡಿ ಮನಸೋತಾನ... ಹುಚ್ಚು ಹುಡ್ಗ. ಆಕೆ ಕಥೆ ಅವನಿಗೆ ಗೊತ್ತಾದೋ ಇಲ್ಲೋ...?'

'ಗೊತ್ತದ ಸಂಗಪ್ಪ, ಮಗ ಮರುಳಶಂಕರನ



